# ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು – 570 006

ಆಡಳಿತ ವಿಭಾಗ

## ಕಛೇರಿ ಆದೇಶ:

**ವಿಷಯ:** ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು), ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ ಸಂಬಂಧದಲ್ಲಿ ಶಿಸ್ತುಕ್ರಮದ ಅಂತಿಮ ಆದೇಶ ಜಾರಿಗೊಳಿಸುವ ಕುರಿತು:

**ಉಲ್ಲೇಖ:** 1.ಈ ಕಛೇರಿ ಷೋಕಾಸ್ ನೋಟಿಸ್ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/565/2020-21, ದಿನಾಂಕ:21.05.2020.

2. ಆರೋಪಿತ ನೌಕರನ ಹೇಳಿಕೆ ದಿನಾಂಕ: 20.06.2020.
3. ಈ ಕಛೇರಿ ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-2/565/2020-21, ದಿನಾಂಕ:22.07.2020.
4. ದಿನಾಂಕ: 07.08.2020 ರಂದು ನಡೆದ 161 ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ
5. ಈ ಕಛೇರಿ ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-2/565/2020-21, ದಿನಾಂಕ: 19.10.2020.
6. ಈ ಕಛೇರಿ ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-2/565/2022-23, ದಿನಾಂಕ: 29.04.2022.
7. ಈ ಕಛೇರಿ ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-2/565/2022-23,ದಿನಾಂಕ: 24.05.2022.
8. ವಿಚಾರಣಾಧಿಕಾರಿಗಳ ವರದಿ ದಿನಾಂಕ: 31.08.2023.
9. ದಿನಾಂಕ: 01.12.2023 ರಂದು ನಡೆದ 175ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ.
10. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 21.12.2023.
11. ಆರೋಪಿತ ನೌಕರನ ಹೇಳಿಕೆ ದಿನಾಂಕ: 06.01.2024.
12. ಮಾನ್ಯ ಕುಲಪತಿಗಳ ಆದೇಶ ದಿನಾಂಕ:11.01.2024.

*******

<u>ಪ್ರಸ್ತಾವನೆ:</u>

ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು), ಕರಾಮುವಿ ಪ್ರಾದೇಶಿಕ ಕೇಂದ್ರ, ಚಿಕ್ಕಮಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರದಲ್ಲಿನ ತಾತ್ಕಾಲಿಕ ನೌಕರರುಗಳೊಂದಿಗೆ ಹಾಗೂ ಪ್ರಾದೇಶಿಕ ನಿರ್ದೇಶಕರೊಂದಿಗೆ ವಾಗ್ವಾದ ಮಾಡುವುದು ಕಛೇರಿ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು, ಮಹಿಳಾ ನೌಕರರೊಂದಿಗೆ ಅಸಭ್ಯವಾದ ಮಾತುಗಳನ್ನಾಡುವುದು ಹಾಗೂ ಅವರನ್ನು ವಕ್ರದೃಷ್ಟಿಯಲ್ಲಿ ನೋಡುವುದು, ಅಲ್ಲದೆ ಅಗೌರವಯುತವಾಗಿ ಮಾತನಾಡಿರುವ ಸಂಬಂಧ ದೂರು ಬಂದಿರುತ್ತದೆ.

ಶ್ರೀ ಸಿ.ಬಿ.ಮಂಜುನಾಥರವರು, ಹಿಂದೆ ತುಮಕೂರು ಪ್ರಾದೇಶಿಕ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿ ಪೀಠೋಪಕರಣಗಳ ಮೇಲೆ ಕಾಲು ಚಾಚಿ ಮಲಗಿದ್ದು, ಸದರಿ ಸಂಬಂಧ ಪತ್ರಿಕಾ ಮಾಧ್ಯಮದಲ್ಲಿ ಪ್ರಕಟಗೊಂಡು ವಿಶ್ವವಿದ್ಯಾನಿಲಯದ ಘನತೆಗೆ ಚ್ಯುತಿ ಉಂಟಾದ ಹಿನ್ನೆಲೆಯಲ್ಲಿ ಸದರಿಯವರನ್ನು ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರಕ್ಕೆ ವರ್ಗಾವಣೆ ಮಾಡಲಾಗಿರುತ್ತದೆ. ಆದರೂ ಅಂತಹ ದುರ್ನಡತೆಗಳು ಪುನರಾವರ್ತನೆಯಾಗಿರುವ ಬಗ್ಗೆ ದೂರು ಬಂದಿರುತ್ತದೆ.

ಶ್ರೀ ಸಿ.ಬಿ.ಮಂಜುನಾಥರವರು, ತುಮಕೂರು ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುವುದರ ಕುರಿತು ಈ ಹಿಂದೆ ಸೂಚಿ ನೀಡಲಾಗಿರುತ್ತದೆ. ಅದಾಗ್ಯೂ ದುರ್ನಡತೆಗಳು ಪುನರಾವರ್ತನೆಯಾದ ಹಿನ್ನೆಲೆಯಲ್ಲಿ

ಆರೋಪಗಳನ್ನು ಒಳಗೊಂಡಂತೆ **"ಷೋಕಾಸ್ ನೋಟೀಸ್"** ನೀಡಲಾಗಿರುತ್ತದೆ. ಸದರಿ ಷೋಕಾಸ್ ನೋಟಿಸ್‌ಗೆ ವ್ಯತಿರಿಕ್ತವಾಗಿ ಉತ್ತರ ನೀಡಿದ್ದು, ಆರೋಪ ಪಟ್ಟಿಯಲ್ಲಿರುವ ಆಪಾದನೆಗಳನ್ನು ಒಪ್ಪಿಕೊಂಡಿರುವುದಿಲ್ಲ.

ದಿನಾಂಕ: 15.07.2020ರ ಪತ್ರದಲ್ಲಿ ಪ್ರಾದೇಶಿಕ ನಿರ್ದೇಶಕರು ಸದರಿ ಕೇಂದ್ರದಲ್ಲಿ ಇಲ್ಲದ ಸಮಯದಲ್ಲಿ ಬಲವಂತವಾಗಿ ವಾರ್ಡ್‌ರೋಬ್‌ಅನ್ನು ತೆಗೆದಿರುವ ಬಗ್ಗೆ ದೂರು ಬಂದಿರುತ್ತದೆ. ಈ ವರ್ತನೆಯು ವಿಶ್ವವಿದ್ಯಾನಿಲಯದ ನೌಕರನಿಗೆ ತರವಲ್ಲದ್ದಾಗಿದ್ದು ದುರ್ವರ್ತನೆಯಾಗಿರುತ್ತದೆ.

ಶ್ರೀ ಸಿ.ಬಿ.ಮಂಜುನಾಥರವರು, ನಿಕಟಪೂರ್ವ ಪ್ರಾದೇಶಿಕ ನಿರ್ದೇಶಕರ ಹೆಸರಿನಲ್ಲಿ ಸುಳ್ಳು ರಾಜಿನಾಮೆ ಪತ್ರ ಸೃಷ್ಟಿಸಿ ವಂಚಿಸಿರುವ ಹಾಗೂ ಅವರ ಸಹಿಯ ಪಡಿಯಚ್ಚನ್ನು ಕದ್ದಿರುವುದಾಗಿ ಕ್ರಿಮಿನಲ್ ದೂರು ದಾಖಲಾಗಿದ್ದು, ದೂರಿನಲ್ಲಿ ಸದರಿಯವರು ಒಂದನೇ ಆರೋಪಿಯಾಗಿದ್ದು, ಈ ದೂರಿನನ್ವಯ ಆರೋಪಿಯಾದ ಶ್ರೀ ಸಿ.ಬಿ.ಮಂಜುನಾಥ, ಇವರು III Additional Civil & JMFC, Tumkur, ಇವರಿಂದ ಷರತ್ತುಬದ್ಧ ಜಾಮೀನು ಪಡೆದಿರುತ್ತಾರೆ. ಈ ವರ್ತನೆಯು ವಿಶ್ವವಿದ್ಯಾನಿಲಯದ ನೌಕರನಿಗೆ ತರವಲ್ಲದ್ದಾಗಿದ್ದು, ವರ್ತನೆಯು ದುರ್ವರ್ತನೆಯಿಂದ ಕೂಡಿದ್ದಾಗಿರುತ್ತದೆ. ಈ ಮೂಲಕ ವಿಶ್ವವಿದ್ಯಾನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ (ವರ್ತನೆ) ಪರಿನಿಯಮದ ನಿಯಮ-3ಅನ್ನು ಉಲ್ಲಂಘಿಸಿದ್ದು, ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ 09 ಮತ್ತು 10 ರಂತೆ **"ಷೋಕಾಸ್ ನೋಟೀಸ್"** ಜಾರಿ ಮಾಡಲಾಗಿದ್ದು, ಆರೋಪಿತ ನೌಕರ ಸಲ್ಲಿಸಿದ ಹೇಳಿಕೆಯಲ್ಲಿ ವಿಶ್ವವಿದ್ಯಾನಿಲಯ ಮಾಡಲಾದ ಆರೋಪಗಳನ್ನು ಒಪ್ಪಿಕೊಳ್ಳದ ಹಾಗೂ ವ್ಯತಿರಿಕ್ತವಾಗಿ ಉತ್ತರ ನೀಡಿರುವ ಹಿನ್ನೆಲೆಯಲ್ಲಿ ಆರೋಪಗಳ ಸತ್ಯಾಸತ್ಯತೆ ಅರಿಯುವ ದೃಷ್ಟಿಯಿಂದ ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ 7 (1)(ಎ) ರನ್ವಯ ಸದರಿ ನೌಕರರನ್ನು ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಮಾಡಲಾದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ದೃಷ್ಟಿಯಿಂದ ಉಲ್ಲೇಖ -5 ಮತ್ತು 6 ರ ಆದೇಶದಂತೆ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿ ಆದೇಶಿಸಲಾಗಿತ್ತು. ಸದರಿ ವಿಚಾರಣಾಧಿಕಾರಿಗಳು ಸಮಯದ ಅಭಾವದಿಂದ ಹಾಗೂ ಇನ್ನಿತರೆ ಕಾರಣಗಳಿಂದ ವಿಚಾರಣೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಅಂತಿಮವಾಗಿ ಉಲ್ಲೇಖ-7ರನ್ವಯ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿ ಆದೇಶಿಸಲಾಗಿದ್ದು, ಸದರಿ ವಿಚಾರಣಾಧಿಕಾರಿಗಳು ದಿನಾಂಕ:02.07.2022 ರಿಂದ ವಿಚಾರಣೆಯನ್ನು ಪುನರ್ ಆರಂಭಿಸಿ ಸುದೀರ್ಘ ವಿಚಾರಣೆಯನ್ನು ನಡೆಸಿ ದಿನಾಂಕ:31.08.2023 ರಂದು ವಿಶ್ವವಿದ್ಯಾನಿಲಯದ ಶಿಸ್ತು ಪ್ರಾಧಿಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಇಲಾಖಾ ವಿಚಾರಣೆಯ ವರದಿಯನ್ನು ದಿನಾಂಕ: 01.12.2023 ರಂದು ನಡೆದ 175ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿ ಸದರಿ ವಿಚಾರಣಾ ವರದಿಯನ್ನು ಅಂಗೀಕರಿಸಿ, **ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರ ಮೇಲೆ ಮಾಡಲಾದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿ ಇವರನ್ನು ನಿಯಮಾನುಸಾರ ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಲಾಗಿರುತ್ತದೆ.**

ಮುಂದುವರೆದು, ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ-12 ರನ್ವಯ ವಿಚಾರಣಾ ವರದಿಯನ್ನು ಆರೋಪಿತ ನೌಕರನಿಗೆ ರವಾನಿಸಲಾಗಿರುತ್ತದೆ. ಸದರಿ ನೌಕರರು ಉಲ್ಲೇಖ-11 ರ ಪತ್ರದ ಮೂಲಕ ಅಹಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

**ಆರೋಪಿತ ನೌಕರ ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರು ರಕ್ಷಣಾತ್ಮಕ ಹೇಳಿಕೆ ಸಲ್ಲಿಸದೆ ಪುನಃ ವ್ಯತಿರಿಕ್ತವಾಗಿ, ಉದ್ಧಟತನದಿಂದ ಹಾಗೂ ಸತ್ಯಕ್ಕೆ ದೂರವಾದ**

ಹೇಳಿಕೆ ನೀಡಿರುವುದು ಅಸಂಬದ್ಧವಾಗಿದ್ದು, ಆಪಾದಿತನಾದ ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರನ್ನು ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ ಭಾಗ III (5) (1) (Viii) ಪ್ರಕಾರ ವ್ಯವಸ್ಥಾಪನಾ ಮಂಡಳಿ ತೀರ್ಮಾನದಂತೆ ಕಡ್ಡಾಯ ನಿವೃತ್ತಿಗೊಳಿಸಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರದ ತೀರ್ಮಾನವನ್ನು ಜಾರಿಗೊಳಿಸುವ ಸಂಬಂಧದಲ್ಲಿ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/565/2023-24, ದಿನಾಂಕ:17.01.2024**

ಪ್ರಸ್ತಾವನೆಗೊಳಪಟ್ಟು, ವ್ಯವಸ್ಥಾಪನಾ ಮಂಡಳಿ ತೀರ್ಮಾನ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, **ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು,** ಇವರ ವಿರುದ್ಧ ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ 09 ಮತ್ತು 10 ರಂತೆ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆಯಲ್ಲಿ ಕರಾಮುವಿ ನಿಲಯವು ಮಾಡಲಾದ ಎಲ್ಲಾ ಆರೋಪಗಳು ಸಾಬೀತಾಗಿದ್ದು, ವಿಚಾರಣಾ ವರದಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯು ಸಂಪೂರ್ಣವಾಗಿ ಅಂಗೀಕರಿಸಿ, ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ **ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು) ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು ಇವರನ್ನು ತಕ್ಷಣದಿಂದ ಜಾರಿಗೆ ಬಂದಂತೆ** ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ ಭಾಗ III (5) (1) (Viii) ರನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ **ಕಡ್ಡಾಯ ನಿವೃತ್ತಿ ದಂಡನೆ** ವಿಧಿಸಿ ಆದೇಶಿಸಲಾಗಿದೆ.

ಶಿಸ್ತುಪ್ರಾಧಿಕಾರದ ಆದೇಶದ ಮೇರೆಗೆ,

17/1/2024

ಕುಲಸಚಿವ

ಗೆ:

**ಶ್ರೀ ಸಿ.ಬಿ.ಮಂಜುನಾಥ, ಟಿಸಿಸಿ (ಅಮಾನತ್ತು), ಬಿನ್ ಲೇ ಬಸಪ್ಪ, #492, ಮೇದರ್ ಬೀದಿ, ಚನ್ನಗಿರಿ ಟೌನ್ ತಾಲ್ಲೂಕು ಮತ್ತು ಅಂಚೆ, ದಾವಣಗೆರೆ ಜಿಲ್ಲೆ-577 213.**

ಪ್ರತಿ:

1. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು - ಸೂಕ್ತ ಕ್ರಮಕ್ಕಾಗಿ.
2. ಡೀನ್ (ಅಧ್ಯಯನಕೇಂದ್ರ),ಕರಾಮುವಿ, ಮೈಸೂರು - ಸೂಕ್ತ ಕ್ರಮಕ್ಕಾಗಿ.
3. ಡೀನ್(ಶೈಕ್ಷಣಿಕ), ಕರಾಮುವಿ, ಮೈಸೂರು.
4. ಕುಲಸಚಿವ (ಪರೀಕ್ಷಾಂಗ), ಕರಾಮುವಿ, ಮೈಸೂರು.
5. ಮುಖ್ಯಸ್ಥರು, ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
6. ಪ್ರಾದೇಶಿಕ ನಿರ್ದೇಶಕರು, ಕರಾಮುವಿ, ಪ್ರಾದೇಶಿಕ ಕೇಂದ್ರ, ತುಮಕೂರು.
7. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಕರಾಮುವಿ.
8. ಕಾರ್ಯಪಾಲಕ ಅಭಿಯಂತರರು, ಕರಾಮುವಿ, ಮೈಸೂರು.
9. ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
10. ಎಲ್ಲಾ ನಿರ್ದೇಶಕರು/ಸಂಯೋಜನಾಧಿಕಾರಿಗಳು, ಕರಾಮುವಿ, ಮೈಸೂರು.
11. ಸರ್ಕಾರಿ ಲೆಕ್ಕ ಪರಿಶೋಧಕರು, ಕ್ರಾಫರ್ಡ್ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಡಾ.ಸಿ.ಜಿ.ನವೀನ್‌ಕುಮಾರ್, ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ ಇವರಿಗೆ - ಸದರಿ ಆದೇಶವನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.
13. ಕಾರ್ಯನಿರ್ವಾಹಕರು, ಸಿಬ್ಬಂದಿ ಶಾಖೆ-2, ಆಡಳಿತ ವಿಭಾಗ, ಕರಾಮುವಿ ಇವರಿಗೆ – ಈ ಮಾಹಿತಿಯನ್ನು ಸದರಿಯವರ ಸೇವಾ ಪುಸ್ತಕದಲ್ಲಿ ಕಡ್ಡಾಯವಾಗಿ ದಾಖಲಿಸಲು ಸೂಚಿಸಿದೆ.
14. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
15. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
16. ವೈಯಕ್ತಿಕ ಕಡತ/ ಕಚೇರಿ ಪ್ರತಿ.